ಸಹಾಯ ಧನವನ್ನು ಇಲಾಖೆವತಿಯಿಂದ ನೀಡಲಾಗುವುದು. ಈ ಯೋಜನೆ 1992–93ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಹಾ ಅನುಷ್ಠಾನಗೊಳಿಸಲಾಗುತ್ತಿದೆ.

ತುಂತುರು ನೀರಾವರಿ ಯೋಜನೆಯನ್ನು 1992–93ನೇ ಸಾಲಿನಲ್ಲಿ ಸಾಂಬಾರು ಮಂಡಳಿ ಮತ್ತು ರಾಜ್ಯ ಸರ್ಕಾರದ (50:50) ಆರ್ಥಿಕ ಸಹಾಯದೊಂದಿಗೆ ಧಾರವಾಡ ಜಿಲ್ಲೆಯಲ್ಲಿ ಬ್ಯಾಡಗಿ ಮೆಣಸಿನಕಾಯಿ ಬೆಳೆಗೆ ತುಂತುರು ನೀರಾವರಿ ಪದ್ಧತಿ ಅಳವಡಿಸಲು 10 ಲಕ್ಷ ರೂ.ಗಳ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ 1 ರಿಂದ 10 ಎಕರೆ ಬ್ಯಾಡಗಿ ಮೆಣಸಿನಕಾಯಿ ಬೆಳೆಯುವ ಪ್ರದೇಶದಲ್ಲಿ ತುಂತುರು ನೀರಾವರಿ ಅಳವಡಿಸುವ ರೈತರಿಗೆ ಶೇಕಡಾ 50ರಷ್ಟು ಘಟಕ ವೆಚ್ಚ ಸಹಾಯ ಧನವನ್ನಾಗಿ ನೀಡಲಾಗುವುದು. ತುಂತುರು ನೀರಾವರಿ ಪದ್ಧತಿಯನ್ನು ರೈತರು ಕರ್ನಾಟಕ ಸರಕು ಖರೀದಿ ಇಲಾಖೆಯಿಂದ ಅನುಮೋದಿತವಾದ ಸಂಸ್ಥೆಗಳಿಂದ ಅಳವಡಿಸಬೇಕು.

ಆ. ಹೌದು.

ಇ. ಹೌದು.

ಸರ್ಕಾರದ ಜಮೀನು ಬಗರ್ ಹುಕುಂ ಸಾಗುವಳಿ ಮಾಡಿರುವವರು ಅರ್ಜಿ ಹಾಕಿಕೊಳ್ಳಲು ಕಾಲಾವಧಿ ವಿಸ್ತರಣೆ.

1037 (20): ಶ್ರೀ ಎ. ಪಿ. ಉಮಾಪತಿ (ಹೊಳಲ್ಕೆರೆ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಜಮೀನುಗಳನ್ನು ಸಕ್ರಮಗೊಳಿಸಲು ಅರ್ಜಿ ಹಾಕಿಕೊಳ್ಳಲು ಸರ್ಕಾರ ಒಂದು ತಾರೀಖು ನಿಗದಿ ಪಡಿಸಿದ್ದು ಅನೇಕ ಕಾರಣಗಳಿಂದ ಬಹುತೇಕ ಜನರು ಸಕಾಲದಲ್ಲೂ ಅರ್ಜಿ ಹಾಕಿಕೊಳ್ಳದೆ ಈಚೆಗೆ ಅರ್ಜಿಗಳು ಬಂದಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಅಂತಹ ಕಾಲಾತೀತವಾಗಿ ಬಂದಿರುವ ಅರ್ಜಿಗಳಿಗೆ ಪುರಸ್ಕಾರ ದೊರೆಯಿಡೆ ಪ್ರಸ್ತುತ ಸಾಗುವಳಿ ಮಾಡಿರುವವರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಈ ರೀತಿ ಕಾಲವಿಳಂಬವಾಗಿ ಬಂದಿರುವ ನ್ಯಾಯವಾದ ಅರ್ಜಿಗಳನ್ನು ಪುರಸ್ಕರಿಸುವಂತೆ ಸಂಬಂಧಪಟ್ಟ ಕಂದಾಯ ಇಲಾಖಾ ಅಧಿಕಾರಿಗಳಿಗೆ ಆದೇಶ ಹೊರಡಿಸುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಆ. ಹೌದು.

ಆ. ಅನ್ಯಾಯವಾಗಿದೆ ಎಂದು ಹೇಳಿರುವ ಪ್ರಶ್ನೆ ಉದ್ಭವಿಸುವುದಿಲ್ಲ. ಕಾರಣ, ಅರ್ಜಿಗಳನ್ನು ಸಲ್ಲಿಸಲು ಸಾಕಷ್ಟು ಪ್ರಚಾರ ಕಾಲಾವಕಾಶಗಳನ್ನು ನೀಡಲಾಗಿತ್ತು. ಆದಾಗ್ಯೂ ಅಂತಹ ವ್ಯಕ್ತಿಗಳು ನಿಗದಿತ ಕಾಲದಲ್ಲಿ ಅರ್ಜಿಗಳನ್ನು ಸಲ್ಲಿಸದೇ ಸರ್ಕಾರವನ್ನು ದೂಷಿಸುವುದು ಸೂಕ್ತವಲ್ಲ.

ಇ. ಇಲ್ಲ.